# 2022 ರ ಬೋಧಕರ ವರ್ಗಾವಣೆಯ ಬಗ್ಗೆ ಸೂಚನೆಗಳು

- ಈ ಕಛೇರಿಯ ದಿನಾಂಕ:29-04-2022ರ ಆದೇಶದಲ್ಲಿ ಇಲಾಖೆಯ ಬೋಧಕರನ್ನು ಕೌನ್ಸಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಕಾಲೇಜುಗಳಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.
- ಸದರಿ ಆದೇಶದಲ್ಲಿ ದಿನಾಂಕ:30-04-2022 ರ ಅಪರಾಹ್ನದಿಂದ ಬಿಡುಗಡೆಗೊಳಿಸಿ ದಿನಾಂಕ:01-05-2022ರ ನಂತರದ ವೇತನ ಮತ್ತು ಭತ್ಯೆಗಳನ್ನು ವರ್ಗಾವಣೆಗೊಂಡ ಕಾಲೇಜಿನಿಂದಲೇ ಪಡೆಯುವಂತೆ ಸೂಚಿಸಲಾಗಿರುತ್ತದೆ.
- ಕೇಂದ್ರ ಕಛೇರಿಯಿಂದಲೇ ಬಿಡುಗಡೆಗೊಳಿಸಿರುವುದರಿಂದ ಬೋಧಕರು ನೇರವಾಗಿ ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ.
- ಗ್ರಂಥಪಾಲಕರು,ದೈಹಿಕ ಶಿಕ್ಷಣ ನಿರ್ದೇಶಕರು, ಪ್ರಾಂಶುಪಾಲರ ಪ್ರಭಾರವನ್ನು ಹೊಂದಿರುವ ಬೋಧಕರು ಹಾಗೂ ಕಾಲೇಜಿನ ಇತರ ಪ್ರಭಾರಗಳನ್ನು ಹೊಂದಿರುವ ಬೋಧಕರು ನಿಯಮಾನುಸಾರ ಪ್ರಭಾರಗಳನ್ನು ಅರ್ಹ ಬೋಧಕರಿಗೆ ವಹಿಸಿಕೊಟ್ಟು ದಿನಾಂಕ:05-05-2022ರ ಒಳಗಾಗಿ ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು.
- ಇತರ ಎಲ್ಲಾ ಬೋಧಕರನ್ನು ದಿ:30.04.2022ರ ಅಪರಾಹ್ನ ಬಿಡುಗಡೆಗೊಳಿಸಿರುವುದರಿಂದ ನೇರವಾಗಿ ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು.
- ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ವರ್ಗಾವಣೆಗೊಂಡ ಬೋಧಕರನ್ನು ದಿ:30.04.2022ರ ಅಪರಾಹ್ನ ಬಿಡುಗಡೆಗೊಳಿಸಿರುವುದರಿಂದ ನಿಯಮಾನುಸಾರ ಸೇರುವಿಕೆ ಕಾಲ (Joining time) ಮತ್ತು ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
- ವಿಶೇಷ ಪ್ರಕರಣಗಳಡಿ ಕೋರಿಕೆ ಮೇರೆಗೆ ವರ್ಗಾವಣೆಗೊಂಡ ಬೋಧಕರು ಸೇರುವಿಕೆ ಕಾಲ (Joining time) ಮತ್ತು ವರ್ಗಾವಣೆ ಭತ್ಯೆಗಳಿಗೆ ಅರ್ಹರಿರುವುದಿಲ್ಲ.ಸದರಿ ಬೋಧಕರು ದಿನಾಂಕ:04.05.2022ರಂದು ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು (ದಿನಾಂಕ:01.05.2022, 02.05.2022 & 03.05.2022 ಸಾರ್ವತ್ರಿಕ ರಜೆ ಇರುವುದರಿಂದ)
- ಬೋಧಕರು ಕರ್ತವ್ಯದಿಂದ ಬಿಡುಗಡೆ / ವರದಿ ಮಾಡಿಕೊಂಡ ನಂತರ ಪ್ರಾಂಶುಪಾಲರು ಸಂಬಂಧಿಸಿದ ಮಾಹಿತಿಯೊಂದಿಗೆ ಕೇಂದ್ರ ಕಛೇರಿಯಿಂದ ನೀಡಿರುವ ವರ್ಗಾವಣೆ ಆದೇಶವನ್ನು ದೃಢೀಕರಿಸಿ ಮಹಾಲೇಖಪಾಲರಿಗೆ ಸಲ್ಲಿಸುವುದು.

30/04/2022

Scanned with CamScanner

Scanned with CamScanner